ಶ್ರೀ ಕೆ. ಎಚ್. ಪಾಟೀಲ್.—ನಾನು ಈಗಾಗಲೇ ಈ ಬಗ್ಗೆ ಹೇಳಿದ್ದೇನೆ. ಸಸ್ಪೆಂಡ್ ಮಾಡ ಬೇಕು ಎಂದರೆ ಆ ಕೇಸಿನಲ್ಲಿ ಪ್ರೈಮಾಫೇಸಿ ಪ್ರೂವ್ ಆದರೆ ಎನ್‌ಕ್ವೈರಿ ಮಾಡಿ ಸಸ್ಪೆಂಡ್ ಮಾಡ ಬಹುದು. ಅವನ ಕಲೆಗೆ ಅನುಗುಣವಾಗಿ ಸಹಾನುಭೂತಿಯಿಂದ ಹೆಚ್ಚು ಅವಕಾಶವನ್ನು ಅವನಿಗೆ ಕೊಟ್ಟಿದ್ದೇವೆ. ಇಲ್ಲಿ ಸರ್ಕಾರ ತನ್ನ ಕರ್ತವ್ಯ ಚ್ಯುತಿ ಮಾಡುತ್ತಿದೆ ಎಂದೇನೂ ಇಲ್ಲ. ಸರ್ಕಾರ, ಯಾವ ಅಧಿಕಾರಿಯೇ ತಪ್ಪು ಮಾಡಿದರೂ ಸಹ ಆ ಅಧಿಕಾರಿಯ ಮೇಲೆ ಉಗ್ರವಾದ ಕ್ರಮ ತೆಗೆದು ಕೊಂಡು ಅವರನ್ನು ದಂಡನೆ ಮಾಡುತ್ತದೆ.

(iv) *re: harassment to vegetable growers by Revenue officials in Bangalore city Corporation for illegal gains.*

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ) —ಮಾನ್ಯ ಸಭಾಧಕ್ಷಣಿಯವರೇ ಬೆಂಗಳೂರು ನಗರ ಸಭೆಯ ಕಂದಾಯ ಇಲಾಖೆಯ ನೌಕರರು ನ್ಯಾಯ ಬಾಹಿರವಾಗಿ ಲಾಭ ಪಡೆಯಲು ತರಕಾರಿ ಬೆಳೆಗಾರರಿಗೆ ಕಿರುಕುಳ ಕೊಡುವುದರಿಂದಾಗಿ ಉಂಟಾಗಿರುವ ತೊಂದರೆಗಳ ವಿಚಾರವನ್ನು ನಗರಾಡಳಿತ ಹಾಗೂ ರಾಜಕೀಯ ವಿಶ್ರಾಂತಿ ವೇತನ ಮಂತ್ರಿಗಳ ಗಮನಕ್ಕೆ ತರುತ್ತೇನೆ.

SRI D. K. NAIKER (Minister for Municipal Administration and Political Pensions).—I wish to make the following Statement.

The issue raised is general in nature. However the Corporation is running 52 markets in Bangalore City. Out of them, S. K. R. Market and Russel Market are the major ones. Out of these two, both wholesale and retail business is run on a very large scale in the S.K.R. Market. The vegetable growers and dealers bring lorry loads of vegetables to S. K. R Market every day. It is reported to the Corporation that lorry loads of vegetables enter the market from 5 A.M. till 9 P.M. and unloading and selling in wholesale is a continuons process in the said market. A part from the lorry loads, push carts and head-loads of vege ables enter the said market, Since the lorries and carts enters the market, market fee is levied by the Corporation authorities. The unloading work will continue from 5 A.M. to 9 P.M. encroaching public road causing nuisance to the purchasers. In this connection several complaints were received by the Corporation authorities. Therefore after personal inspection by the concerned authorities action was taken to remove the nuisance to the public restricting the time from 5·00 A.M. to 9 A.M. for wholesale bnsine s. This action was taken in the month of January 1977. Even then the wholesale dealers did not adhere to the timings, but continued to cause the same nuisance. Practically the roads were blocked. Therefore Corp ration authorities were bound to take stringent action against the wholesale dealers. Some times vegetable goods were also seized to prevent the nuisance. Similarly the retail dealers unauthorisedly enter the market and begin to sell encroaching the varandahs obtaining permission from the retail dealers. This was also noticed by the authorities everyday and therefore action was taken against the unauthorised retail dealers also, Even some times vagetables were also seized. The stringent action taken by the

authorities to prevent the nuisance was felt by the wholesale dealers as well as retail dealers as harassment. In the present situation the S.K.R. Market is found short for such business. Therefore the Corporation has taken a scheme to construct a wholesale yard in Kalasipalyam Extension. The work of contracting 276 shops for wholesale merchants is under progress and many of the shops are ready for occupation. If the wholesale dealers section is removed from the S.K R. Market and shifted to Kalasipalyam Wholesale Yard, such nuisance will be prevented successfully. Till then it has become very difficult for the autherities to control the nuisance. The unauthorised persons displaying vegetable goods on encroachments possibly prevented by the authorities taking stringent action. Therefore this nature of harassment if felt cannot be avoided at the present stage. It is only possible if the Wholesale Merchants are shifted to Wholesale Yard at Kalasipalyam Extension. Therefore it is incorrect to say that the harassment is caused to vegetable growers and vendors by the officials of the Revenue Department or the other officers of the Bangalore City Corporation for the illegal gains. There is no substance in it. The Corporation has taken interest in posting good number of officers to prevent the nuisance and to cause convenience to the dealers also.

ಶ್ರೀ ಎಚ್. ಡಿ. ದೇವೇಗೌಡ —ಮಾನ್ಯ ಸಭಾಧ್ಯಕ್ಷಣಿಯವರೇ ಮಾನ್ಯ ಸಚಿವರು ಕೊಟ್ಟಿರ ತಕ್ಕ ಹೇಳಿಕೆಯಲ್ಲಿ ಈಗ ಮಾರ್ಕೆಟಿಂಗ್ ಯಾರ್ಡಿನಲ್ಲಿ ಇರತಕ್ಕ ತೊಂದರಗಳನ್ನು ಹೇಳಿಕೊಂಡಿದ್ದಾರೆ. ಹೋಲ್‌ಸೇಲ್ ಡೀಲರ್ಸ್‌ಗಳು ತಾವು, ಮಾರುವುದಕ್ಕೆ ತಂದಂತಹ ತರಕಾರಿಯನ್ನು ಮಾರ್ಕೆಟ್ ಮುಂಭಾಗದಲ್ಲಿ ಇಟ್ಟುಕೊಂಡಿರುತ್ತಾರೆ ಇವರ ವ್ಯಾಪಾರವನ್ನು ಬೆಳಿಗ್ಗೆ 5 ಗಂಟೆಯಿಂದ 9 ಗಂಟೆಯವರೆಗೆ ಮಾತ್ರ ಮಾಡಬೇಕೆಂದು ರಿಸ್ಟ್ರಿಕ್ಟ್ ಮಾಡಿದ್ದಾರೆ ಕಲಾಸಿಪಾಳ್ಯಂ ವಿಭಾಗವನ್ನು ಮಾಡಿದ ಮೇರೆ ಎಲ್ಲಾ ಸರಿ ಹೋಗುತ್ತದೆ ಎಂದು ಹೇಳಿದ್ದಾರೆ. ಒಂದು ಕಡೆ ಕಾರ್ಪೊರೇಷನ್ನಿನವರ ತಪ್ಪು ಇಲ್ಲ. ಕಲಾಸಿಪಾಳ್ಯಂ ವಿಭಾಗವನ್ನು ಪೂರ್ತಿ ಕಟ್ಟಿಸಿ ಹೋಲ್ ಸೇಲ್ ಡೀಲರ್ಸ್ ಅನ್ನು ಅಲ್ಲಿಗೆ ವರ್ಗಾವಣೆ ಮಾಡುವುದಾದರೆ ಸರಿ ಆದರೆ ಇಲ್ಲಿ ಈಗ ಪರಿಸ್ಥಿತಿ ಏನಾಗಿದೆ ಎಂದರೆ ಬೆಂಗಳೂರಿಗೆ ಹತ್ತಾರು ಮೈಲಿ ಸುತ್ತಮುತ್ತಲ ಪ್ರದೇಶದಿಂದ ತರಕಾರಿ ಬೆಳೆಯುವವರು ತರಕಾರಿಯನ್ನು ತೆಗೆದುಕೊಂಡು ಬರುತ್ತಾರೆ. ಹೋಲ್‌ಸೇಲ್ ಡಿಲರ್ಸ್ ಅದನ್ನು ಬೆಳಿಗ್ಗೆ 9 ಗಂಟೆಯೊಳಗೆ ಕ್ಲಿಯರ್ ಮಾಡದಿದ್ದರೆ ಕಾರ್ಪೋರೇಷನ್ ಅಧಿಕಾರಿಗಳು ಲಾರಿಯಲ್ಲ ತುಂಬಿಕೊಂಡು ಹೋಗುತ್ತಾರೆ. ಈ ಕಾರ್ಯವನ್ನು ನಿರ್ವಹಿಸುವುದಕ್ಕೆ 4-5 ಜನ ಇನ್‌ಸ್ಪೆಕ್ಟರು ಇರುತ್ತಾರೆ. ಅವರು ಈ ತರಕಾರಿಯನ್ನು ಲಾರಿಯಲ್ಲಿ ತುಂಬಿಕೊಂಡು ಹೋಗಿ ತಮ್ಮ ರೂಮಿನಲ್ಲಿ ಹಾಕಿಕೊಳ್ಳುತ್ತಾರೆ. ರೈತ ಇಷ್ಟಗಟ್ಟಲೆ ಕಷ್ಟಪಟ್ಟು ಬೆಳೆದಂತಹ ತರಕಾರಿಯನ್ನು ಮಾರ್ಕೆಟ್ಟಿಗೆ ಹಾಕಿ ದುಡ್ಡು ತೆಗೆದುಕೊಂಡು ಬರೋಣ ಎಂದು ಮಾರ್ಕೆಟ್ಟಿಗೆ ಬಂದಾಗ ಹೋಲ್ ಸೇಲ್ ಡೀಲರ್ಸ್ 9 ಗಂಟೆಯ ಒಳಗೆ ರೈತರು ತಂದಂತಹ ತರಕಾರಿಯಲ್ಲಿ ಕೊಂಡು ಕ್ಲಿಯರ್ ಮಾಡದಿದ್ದರೆ ಅದನ್ನು ಕಾರ್ಪೋರೇಷನ್ ಅಧಿಕಾರಿಗಳು ಲಾರಿಯಲ್ಲಿ ತುಂಬಿಕೊಂಡು ಹೋಗುತ್ತಾರೆ. ಇದನ್ನು ಸರ್ಕಾರದವರು ದಯಮಾಡಿ ತಪ್ಪಿಸಬೇಕು. ನಾವು ಈ ಬಗ್ಗೆ ಪ್ರಶ್ನೆ ಕೇಳಬೇಕು, ತಾವು ಉತ್ತರ ಕೊಡಬೇಕು ಈ ರೀತಿ ಇದು ಆಗಬಾರದು. ಕಾರ್ಪೊರೇಷನ್‌ನಲ್ಲಿ ಇಲ್ಲಿಗಲ್ ಗ್ಯೆನ್ಸ್ ಏನು ನಡೆಯುತ್ತಿದೆ ಎಂಬುದನ್ನು ಯಾರೂ ಸಮರ್ಥನೆ ಮಾಡಬೇಕಾಗಿಲ್ಲ. ಇದು ಎಲ್ಲರಿಗೂ ಜನಜನಿತವಾಗಿ ಗೊತ್ತಿದೆ. ಅದು ಹೇಗೆ ನಡೆಯುತ್ತಿದೆ ಎನ್ನುವುದನ್ನು ವ್ಯಾಖ್ಯಾನ ಮಾಡಬೇಕಾಗಿಲ್ಲ. ಸೀಸ್ ಮಾಡಿದಂಥ ತರಕಾರಿಯನ್ನು ದುಡ್ಡುಕೊಟ್ಟರೆ ಬಿಟ್ಟುಬಿಡು

ತ್ತಾರೆ. ಇದು ಇರುವ ಸತ್ಯಾಂಶ. ಅಧಿಕಾರಿಗಳು ರಿಪೋರ್ಟ್ ಕಳಿಸುತ್ತಾರೆ, ನಿಯಮಗಳ ಪ್ರಕಾರ ತಾವು ಓದುತ್ತೀರಿ, ಬರೀ ಇದೇ ಆಗಬಾರದು. ಅಲ್ಲಗೆ ಬರುವಂಥ ಸಣ್ಣ ರೈತರು ಏನಿದ್ದಾರೆ ಅವರಿಗೆ ಆಗುತ್ತಿರುವ ಅನಾಹುತವನ್ನು ತಪ್ಪಿಸುವ ಕಡೆ ಹೆಚ್ಚು ಗಮನಹರಿಸಬೇಕು. ಏಕೆಂದರೆ ಇವರು ದೊಡ್ಡ ರೈತರಲ್ಲಿ, ಸಣ್ಣ ರೈತರು. ಕಾರ್ಪೊರೇಷನ್ ಅಧಿಕಾರಿಗಳು 9 ಗಂಟೆ ಹೊಡೆಯುವುದನ್ನೇ ಕಾಯುತ್ತಾ ಇರುತ್ತಾರೆ, 9 ಗಂಟೆ ಆದ ಕೂಡಲೇ ಆ ರೈತರ ಮೂಟೆಗಳನ್ನು ತೆಗೆದುಕೊಂಡು ಹೋಗುತ್ತಾರೆ, ಆಮೇಲೆ 5 ರೂಪಾಯಿ, 10 ರೂಪಾಯಿ ಕೊಟ್ಟರೆ ಬಿಟ್ಟುಬಿಡುತ್ತಾರೆ. ನೀವು ಹೋಲ್‌ಸೇಲನ್ನು ಕಲಾಸಿಪಾಳ್ಯಂಗೆ ವರ್ಗ ಮಾಡುವವರೆಗೆ ಇವರ ಕಡೆ ಗಮನ ಹರಿಸಬೇಕು, ಸಣ್ಣ ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೀನೆಂದು ದಯವಾಡಿ ಭರವಸೆ ಕೊಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷಣಿಯವರೇ, ಎಸ್. ಕೆ. ಆರ್. ಮಾರ್ಕೆಟ್‌ಗೆ ನಾನು ಮೂರು, ನಾಲ್ಕು ಸಲ ಸರ್ಪ್ರೈಸಾಗಿ ಹೋಗಿದ್ದೇನೆ. ಅಲ್ಲಿ ರೋಡುಗಳೇ ಸರಿಯಾಗಿ ಇರಲಿಲ್ಲ, ಏಕೆಂದರೆ ತರಕಾರಿಗಳನ್ನು ತಂದು ತಂದು ರೋಡನ್ನೇ ಏನ್‌ಕ್ರೋಚ್‌ಮೆಂಟ್ ಮಾಡಿರುತ್ತಾರೆ. ಖರೀದಿ ಮಾಡುವವರಿಗೂ ಕೂಡ ಸರಿಯಾಗಿ ಇರುವುದಿಲ್ಲ. ನಾನು ಒಂದು ಸಲ ಹೋದಾಗ ಅಧಿಕಾರಿಗಳನ್ನು ಕರೆದುಕೊಂಡು ಹೋಗಿದ್ದೆ, ಮತ್ತೆ ಒಂದೆರಡು ಸಲ ಸರ್ಪ್ರೈಸಾಗಿ ಹೋಗಿದ್ದೆ. ಅಲ್ಲಿ ಕೆಲವರನ್ನು ಟ್ರಾನ್ಸ್‌ಫರ್ ಮಾಡಿದ್ದೇನೆ, ಮತ್ತೆ ಕೆಲವರನ್ನು ಸಸ್ಪೆಂಡ್ ಮಾಡಿದ್ದೇನೆ. ಅಲ್ಲಿ ಸ್ಥಳಿ ಕಂಜೆಕ್ಷನ್ ಇದೆ; ಆದುದರಿಂದ ಹೋರ್‌ಸೇಲ್ ವಿಭಾಗವನ್ನು ರಿಮೂವ್ ಮಾಡಬೇಕು ಎಂದು ದೊಡ್ಡ ಸ್ಕೀಮನ್ನು ಹಾಕಿದ್ದೇವೆ. ಮಾನ್ಯ ದೇವೇಗೌಡರು ಅಲ್ಲಿ ಕೆಲವರಿಗೆ ಹೆರಾಸ್‌ಮೆಂಟ್ ಆಗುತ್ತಾ ಇದೆ, 9 ಗಂಟೆಗೆ ಕ್ಲೋಸ್ ಮಾಡುತ್ತಾರೆ, ಇದರಿಂದ ತೊಂದರೆಯಾಗುತ್ತಿದೆ ಎಂದು ಹೇಳಿದರು. 9 ಗಂಟೆಗೆ ಎಂದು ಏಕೆ ಟೈಮನ್ನು ಹಾಕಿದ್ದೇವೆ ಎಂದರೆ, ಅಷ್ಟು ಹೊತ್ತಿಗೆ ಅವರು ಮುಗಿಸುತ್ತಾರೆ, ಇಲ್ಲದೇ ಹೋದರೆ ಮುಂದುವರೆಸುತ್ತಾರೆ ಅದಕ್ಕೋಸ್ಕರ ನಾವು ಟೈಮಿಂಗ್ ಹಾಕಿರತಕ್ಕಂಥಾದ್ದು. ಟೈಮಿಂಗನ್ನು ಸ್ವಲ್ಪ ಹೆಚ್ಚು ಕಡಿಮೆ ಮಾಡಬಹುದು. ಮಾನ್ಯ ದೇವೇಗೌಡರು ಇಷ್ಟೆಲ್ಲಾ ಅನ್ಯಾಯವಾಗುತ್ತಿದೆ ಎಂದು ಏನು ಹೇಳಿದರು ಅದರಲ್ಲಿ ತೀರ ಸತ್ಯಾಂಶ ಇಲ್ಲ ಎಂದು ನಾನು ಹೇಳುವುದಿಲ್ಲ. ಇದನ್ನು ಯಾವ ಬ್ರಹ್ಮನಿಗೂ ಕಂಟ್ರೋಲ್ ಮಾಡಲಿಕ್ಕೆ ಆಗುವುದಿಲ್ಲ. ನಾನು ಇನ್ನೂ ಒಮ್ಮೆ ಸ್ವತಃ ಹೋಗಿ ಅಲ್ಲಿ ಏನೇನು ನಡೆಯುತ್ತಿದೆಯೆಂದು ನೋಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಅನ್ ಅಥರೈಸ್ಡ್ ಪರ್ಸನ್ಸ್ ಮಾಡುತ್ತಿದ್ದಾರೆ, ಎಂದು ಹೇಳಿದಿರಿ. ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಬೆಳೆಗಾರರಿಗೆ ತೊಂದರೆಯಾಗುವುದು ಬೇಡ ಇದರಕಡೆ ಗಮನಹರಿಸಿ, ಅರ್ಧ ಗಂಟೆ ಹೆಚ್ಚು ಕಡಿಮೆಆದರೂ ಬೆಳೆಗಾರರಿಗೆ ಅನುಕೂಲವಾಗುವ ಹಾಗೆ ಅರ್ಧಗಂಟೆ ಲ್ಯಾಟಿಟ್ಯೂಡ್ ಕೊಡಬೇಕು. ಮಾನ್ಯ ಮಂತ್ರಿಗಳು ಪರ್ಸನಲ್ ಇಂಟರೆಸ್ಟ್ ತೆಗೆದು ಕೊಂಡು ಅಲ್ಲಿಗೆ ಸರ್ಪ್ರೈಸ್ ಆಗಿ ಭೇಟಿ ಕೊಟ್ಟು, ಖರೀದಿದಾರುಗಳ ಬಗ್ಗೆ ಉಗ್ರವಾದ ಕ್ರಮ ತೆಗೆದು ಕೊಳ್ಳಬೇಕು. ನಾನು ಕಾಲಿಂಗ್ ಅಟೆನ್‌ಷನ್ ಕಳಿಸಿದ ಮೇಲೆ ಇನ್ನಷ್ಟು ಕಿರುಕುಳ ಜಾಸ್ತಿಯಾಗಿದೆಯಂತೆ. ನೀವೇಲ್ಲಾ ದೂರು ಕೊಟ್ಟಿದ್ದೀರಿ, ನಿಮಗೆ ಬುದ್ಧಿ ಕಲಿಸುತ್ತೇವೆ ಎಂದು ನೇಡಿನ ಪ್ರತೀಕಾರವನ್ನು ತೀರಿಸಿಕೊಳ್ಳುವುದಕ್ಕೆ ಅಲ್ಲಿನ ಅಧಿಕಾರಿಗಳು ಹೊರಟಿದ್ದಾರೆಂದು ನಾನು ಕೇಳಿದ್ದೇನೆ. ಈಗ 5 ರೂಪಾಯಿ ಕೊಟ್ಟು ಮೂಟೆ ಹೊರಿಸಿಕೊಂಡು ಬರುತ್ತಿದ್ದವರು ನಿಂತು ಹೋಗಿದೆ. ಈಗ ಒಂದು ವಾರದಿಂದ ಕಿರುಕುಳ ಹೆಚ್ಚು ಮಾಡುವುದಕ್ಕೆ ಹೊರಟ್ಟಿದ್ದಾರೆ. ಆದುದರಿಂದ ದಯವಾಡಿ ಈ ಕಡೆ ಹೆಚ್ಚು ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಕೆ ನಾಯ್ಕರ್.—ನಾನು ಹೋಗಿ ನೋಡುತ್ತೇನೆ.

ಶ್ರೀ ಟಿ ಆರ್. ಶಾಮಣ್ಣ.—ಬೆಂಗಳೂರು ನಗರದ ಕೆ. ಆರ್. ಮಾರ್ಕೆಟ್, ಈ ನಗರದಲ್ಲಿ ಪಾಪುಲೇಷನ್ 3 ಲಕ್ಷಕ್ಕಿಂತ ಕಡಿಮೆ ಇದ್ದಾಗ ಕಟ್ಟಿದಂಥ ಮಾರ್ಕೆಟ್. ಈಗ ಪಾಪುಲೇಷನ್ 5 ರಷ್ಟು ಜಾಸ್ತಿಯಾಗಿದೆ. ಕೆ ಆರ್. ಮಾರ್ಕೆಟ್‌ನಲ್ಲಿ 3 ತರಹ ವರವಾನವಿದೆ ಒಂದನೆಯದು, ತರಕಾರಿಯನ್ನು ಒಳಗೆ ತಂದಾಗ ಗಾಡಿಗೆ ಇಷ್ಟು, ಮೂಟೆಗೆ ಇಷ್ಟು ಎಂದು ಹಾಕತಕ್ಕಂಥಾದ್ದು,

ಎರಡನೆಯದು, ತರಕಾರಿ ಇಟ್ಟುಕೊಂಡು ಮಾರುವವರ ಹತ್ತಿರ ಚೀಟಿ ಕೊಟ್ಟು ಹಣ ತೆಗೆದುಕೊಂಡು ಪರವಾನಿಗಿ ಕೊಡುವಂಥಾದ್ದು, ಮೂರನೆಯದು. ಅಂಗಡಿಗಳ ಬಾಡಿಗೆ. ಈಗ ಗ್ರೌಂಡ್ ರೆಂಟೂ ಡಬಲ್ ಆಗಿದೆ. ಇಲ್ಲಿ ವ್ಯಾಪಾರ ಮಾಡುವವರಲ್ಲಿ ಎರಡು ತರಹ ಇದೆ. ಒಂದು ಹೊರಗಡೆ ಫುಟ್ ಪಾತ್‌ನಲ್ಲಿ ಇಟ್ಟುಕೊಂಡು ಮಾರುವವರು, ಎರಡನೆಯದು ಒಳಗಡೆ ಕೆಳಗೆ ಇಟ್ಟುಕೊಂಡು ಮಾರುವವರು. ಇದರಲ್ಲಿ ಅಕ್ರಮಗಳು ನಡೆಯುತ್ತಾ ಇಲ್ಲ, ಲಂಚ ತೆಗೆದುಕೊಳ್ಳುತ್ತಾ ಇಲ್ಲ ಎಂದು ಹೇಳಿದರೆ ಅದನ್ನು ನಂಬುವುದಕ್ಕಾಗುವುದಿಲ್ಲ. ಏಕೆಂದರೆ, ಒಬ್ಬ ಆಫೀಸರು ನಾಲ್ಕೈದು ಸಾರಿ ಟ್ರಾನ್ಸ್‌ಫರ್ ಮಾಡಿದರೂ ಕೂಡ ಅಲ್ಲಿಗೇ ಬಂದಿದ್ದಾನೆ. ಸುಮಾರು ಐದಾರು ಸಾವಿರ ರೂಪಾಯಿಗಳನ್ನು ಕೊಟ್ಟು ಅಲ್ಲಿಗೆ ಬರುತ್ತಾರೆ. ಈಗ ಏಳನೇ ಸಾರಿ ಒಬ್ಬ ಇನ್‌ಸ್ಪೆಕ್ಟರ್ ಅಲ್ಲಿಗೆ ಬಂದಿದ್ದಾನೆ. ಮಾನ್ಯ ಮಂತ್ರಿಗಳು ಹೋಗಿದ್ದಾರೆ. ಕ್ರಮ ತಪ್ಪಿಸಬೇಕಾದರೆ ತೆಗೆದುಕೊಂಡಿದ್ದಾರೆ. ಆದರೆ ಅಲ್ಲಿ ಅವ್ಯವಹಾರಗಳು ಏನು ನಡೆಯುತ್ತಾ ಇದೆ, ಅದನ್ನು ಅಲ್ಲರತಕ್ಕಂಥ ಕಬ್ಬಿಣದ ಗುಜರಿ ಏನಿದೆ ಅದನ್ನು ಬೇರೆ ಕಡೆಗೆ ಹಾಕಿ, ಅಲ್ಲಿ ಸಣ್ಣ ಸಣ್ಣ ವ್ಯಾಪಾರ ಮಾಡುವವರನ್ನು ಹಾಕಬೇಕು ಈಗ 6 ಕೋಟಿರೂಪಾಯಿಗಳಲ್ಲಿ ರೀಮಾಡೆಲ್ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಹೊಸ ಮಾರ್ಕೆಟಿಗೆ ಟ್ರಾನ್ಸ್‌ಫರ್ ಮಾಡದೇಕಾದರೆ ಕೆಲವರನ್ನು ಇಲ್ಲೇ ಇಟ್ಟುಕೊಂಡು, ಕೆಲವರನ್ನು ಅಲ್ಲಿಗೆ ಕಳಿಸಿದರೆ ತೊಂದರೆಯಾಗುತ್ತದೆ. ಆದುದರಿಂದ ಎಲ್ಲರನ್ನೂ ಒಂದೇಸಾರಿ ಕಳಿಸಿಬಿಟ್ಟರೆ ಒಳ್ಳೆಯದು. ಒಟ್ಟಿನಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮಾಡ ಬೇಕು. ಮಾರ್ಕೆಟಿನ ಗೇಟ್ ಬಾಗಿಲಿನ ಪಕ್ಕದಲ್ಲಿ ಒಂದು ರೂಮಿದೆ. ಅಲ್ಲಿ ನಾಲ್ಕೈದು ಸಾವಿರ ರೂಪಾಯಿ ಸೀಸ್ ಮಾಡಿರುವ ಹಣುಣ್ಣಗಳನ್ನು ತುಂಬಿರುತ್ತಾರೆ. ಎರಡು ಗಂಟೆಗೆ ಹರಾಜು ಹಾಕುತ್ತೇವೆ ಎಂದು ಹೇಳುತ್ತಾರೆ, ನುಮ್ಮನೆ ಕೂಗಿದ ಹಾಗೆ ಮಾಡುತ್ತಾರೆ, ಆಮೇಲೆ ಗ್ರೇಡ್‌ಗಳ ಮೇಲೆ ಕೊಡುತ್ತಾರೆ. ಅಲ್ಲಿ ಅವ್ಯವಹಾರಗಳು ನಡೆಯುವುದಕ್ಕೆ ಅವಕಾಶವಾಗದ ಹಾಗೆ ಮಾಡ ಬೇಕು. ಆದುದರಿಂದ ಮಾನ್ಯ ಮಂತ್ರಿಗಳು ಒಂದೆರಡು ಸಲ ಸರ್ಪ್ರೈಸ್ ಭೇಟಿ ಕೊಟ್ಟು ನಿಜಸ್ಥಿತಿ ಯನ್ನು ನೋಡಿ ಸಂಬಂಧಪಟ್ಟವರ ಮೇಲೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ನಾನು ಹೋದಾಗಲೆಲ್ಲಾ ಅಲ್ಲಿನಡೆದದ್ದು ಇಷ್ಟೆ. ಅಲ್ಲಿ ಫದಾರ್ಥಗಳನ್ನು ಮಾರುವವರು, ಕಾಯಿಪಲ್ಲೆಗಳನ್ನು ಮಾರುವವರು ರಸ್ತೆ ಪಕ್ಕದಲ್ಲೇ ಇಟ್ಟುಕೊಂಡಿರುತ್ತಾರೆ ಷಾಪ್ಸ್ ತೆಗೆದುಕೊಂಡಿರುವವರು ಅನ್ ಆಥರೈಸ್ಡ್ ಆಗಿ ಮಾರುವ ಜನರಿಂದ ಪ್ರತಿದಿವಸ ನಾಲ್ಕೈದು ರೂಪಾಯಿಗಳನ್ನು ವಸೂಲು ಮಾಡಿಕೊಂಡು ಅಲ್ಲಿ ಮಾರುವುದಕ್ಕೆ ಪರ್ಮಿಷನ್ ಕೊಟ್ಟಿರುತ್ತಾರೆ ನಾವು ಅಲ್ಲಿಗೆ ಹೋದಾಗ ಡಬಡಬ ಒಡಾಡಿನುತ್ತಾರೆ. ನಾವು ಸೀಸ್ ಮಾಡಲಿಲ್ಲ ಎಂದರೆ, ಅವರು ಅದನ್ನೇ ಕಂಟಿನ್ಯುಟಿ ಪ್ರೊಸೆಸ್ ಮಾಡುತ್ತಾರೆ. ಇದರ ಬಗ್ಗೆ ಕ್ರಮ ತೆಗೆದುಕೊಂಡು ಕಂಟ್ರೋಲ್ ಮಾಡುವಾಗ ಸಾರ್ವಜನಿಕರಿಗೂ ತೊಂದರೆಯಾಗದ ಹಾಗೆ ಮಾಡಬೇಕಾಗುತ್ತದೆ ನಾನು ಹೋದಾಗ ಅಲ್ಲಿ ನಡೆಯುತ್ತಿದ್ದ ಅಕ್ರಮಗಳನ್ನು ನೋಡಿ ರೆವಿನ್ಯೂ ಆಫೀಸರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟೆ. ಮಾನ್ಯ ಸದಸ್ಯರು ಮತ್ತೆ ಆ ಅಧಿಕಾರಿ ಪಾಪಸ್ಸು ಬಂದರು ಎಂದು ಹೇಳಿದರು. ಅದನ್ನು ನಾನು ನೊಡುತ್ತೇನೆ ಒಂದುವೇಳೆ ಆ ರೀತಿ ಬಂದಿದ್ದರೆ ಅದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೆ ಕೆ. ಎಂ. ಎಸ್. ಸರ್ವಿಸ್ ಮಾಡುವುದಕ್ಕೆ ಹೊರಟ್ಟಿದ್ದೇವೆ,

ಶ್ರೀ ಕೆ. ಎಂ. ನಾಗಣ್ಣ.—ಅಲ್ಲಿ 10 ವರ್ಷಗಳಿಂದಲೂ ಹಾಗೆಯೇ ಇದೆ.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರಿಗೆ ಎಷ್ಟು ಫೀಲಿಂಗ್ಸ್ ಇದೆಯೋ ನಾನು ಕೂಡ ಅಷ್ಟೇ ಆಸಕ್ತಿ ವಹಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ವ್ಯವಸಾಯ ಖಾತಾ ಸಚಿವರು ಸ್ಟೇಟ್‌ಮೆಂಟ್ ಮಾಡುತ್ತಾರೆ.